**4 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಧಾರವಾಡ**

**ಎಸ್. ಸಿ. ನಂ. 27/2022**

**ಪಿ ಡಬ್ಲ್ಯೂಃ 12**

**ಸಿ ಡಬ್ಲ್ಯೂಃ 13**

ಸಾಕ್ಷಿದಾರರ ಹೆಸರು : ಭೀಮಪ್ಪ ಗೊಲ್ಲರ

ತಂದೆ ಹೆಸರು : ಭೀಮಪ್ಪ

ವಯಸ್ಸು : 40 ವರ್ಷಗಳು

ಉದ್ಯೋಗ : ಅಟೋ ಚಾಲಕ

ವಾಸಸ್ಥಳ : ಗೊಲ್ಲರ ಕಾಲನಿ, ಧಾರವಾಡ

ದಿನಾಂಕಃ 29.09.2025 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ನಾನು ಧಾರವಾಡದ ಶಿವಾಜಿ ಸರ್ಕಲನಲ್ಲಿ ಅಟೋ ಓಡಿಸುತ್ತೇನೆ. ಪರಶುರಾಮ ಸುಣಗಾರ ಇವರ ಪರಿಚಯ ಇದೆ. ಕೊರವರ ಓಣಿಯಲ್ಲಿ ಅವರ ಮನೆ ಇರುತ್ತದೆ. ಸುಮಾರು ಮೂರು ವರ್ಷದ ಹಿಂದೆ ನಾನು ಬಾಡಿಗೆ ಹೋಗಿ ವಾಪಸ ಬರುತ್ತಿದ್ದಾಗ ಪರಶುರಾಮ ಸುಣಗಾರನ ಮನೆಯ ಹತ್ತಿರ ಜನರು ಸೇರಿದ್ದರು. ನಾನು ನೋಡಿದಾಗ ಪರಶುರಾಮನ ಮಗಳ ತೊಡೆಗೆ

ಗಾಯವಾಗಿ ರಕ್ತ ಬರುತ್ತಿತ್ತು. ಆಕೆಗೆ ಯಾಕೆ ರಕ್ತ ಬರುತ್ತಿದೆ ಮತ್ತು ಏನಾಗಿದೆ ಎಂದು ನನಗೆ ಹೇಳಿಲ್ಲ. ನಾನು ಹೋದ 15 ನಿಮಿಷದಲ್ಲಿ ಅಂದರೆ 12 ಗಂಟೆಗೆ ಆಕೆಯ ತಂದೆ ಬಂದಿದ್ದಾರೆ. ನಂತರ ನನ್ನ ಅಟೋದಲ್ಲಿ ಸಿವಿಲ್ ಆಸ್ಪತ್ರೆಗೆ ಅವರನ್ನು ಸಾಗಿಸಿರುತ್ತೇನೆ. ನಂತರ ದವಾಖಾನೆಯಿಂದ ಠಾಣೆಗೆ ಹೋಗಿದ್ದೇನೆ. ಸದರಿ ಘಟನೆಯ ಬಗ್ಗೆ ನಾನು ಪೋಲಿಸರಿಗೆ ಯಾವುದೇ ಹೇಳಿಕೆ ನೀಡಿಲ್ಲ ನನ್ನ ಸಹಿಯನ್ನು ಪೋಲಿಸರು ಪಡೆದಿದ್ದಾರೆ. ಆಕೆಗೆ ಯಾರು ಯಾವುದರಲ್ಲಿ ಹೊಡೆದಿದ್ದಾರೆ ಎಂದು ನನಗೆ ಮಾಹಿತಿ ಇಲ್ಲ . ನಾನು ಘಟನೆಯನ್ನು ನೋಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ, ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಸರಕಾರಿ ಅಭಿಯೋಜಕರಿಂದ**

ಈಗ ನನಗೆ ಓದಿ ಹೇಳಿದಂತೆ ಪೋಲಿಸರ ಮುಂದೆ ನಾನು ಕೊಟ್ಟ ಹೇಳಿಕೆಯಲ್ಲಿ ದಿಃ 21.02.2022 ರಂದು ಮಧ್ಯಾಹ್ನ 11.30 ಗಂಟೆಗೆ ಓಣಿಯಲ್ಲಿ ನಾನು ಬಾಡಿಗೆಯಿಂದ ವಾಪಸು ಮಾರ್ಕೆಟಗೆ ಹೋಗುತ್ತಿದ್ದಾಗ ಪರಶುರಾಮನ ಮನೆಯ ಹತ್ತಿರ ಜನರು ಸೇರಿಕೊಂಡಿದ್ದು ನಾನು ಹೋಗಿ ನೋಡಿದಾಗ ಪರಶುರಾಮನ ಮಗಳಾದ ತನುಜಾಳ ತೊಡೆಗೆ ಗಾಯವಾಗಿದ್ದು ರಕ್ತ ಬರುತ್ತಿತ್ತು ಎಂದರೆ ಸರಿ. ಆಗ ನಾನು ವಿಚಾರಿಸಿದಾಗ ಶಿವಶಂಕರನು ತನುಜಾಳ ಮನೆಯಲ್ಲಿ ಒಬ್ಬಳೇ ಇದ್ದಾಗ ಕಪಾಳಕ್ಕೆ ಹೊಡೆದು

ಆತನು ತನುಜಾಳ ಎಡಗಾಲಿನ ತೊಡೆಯ ಹಿಂದಿನ ಭಾಗಕ್ಕೆ ಚಾಕುವಿನಿಂದ ಚುಚ್ಚಿದ ಎಂದು ಆಕೆ ಜೋರಾಗಿ ಚೀರಿದಳು ಮತ್ತು ಜನ ಸೇರಿದಾಗ ಆತನು ಓಡಿ ಹೋಗಿರುತ್ತಾನೆ ಎಂದು ನನಗೆ ವಿಷಯ ತಿಳಿಯಿತು ಎಂದರೆ ಸರಿಯಲ್ಲ.

ಆತನು ತನುಜಾಳನ್ನು ಕೊಲೆ ಮಾಡುವ ಉದ್ದೇಶದಿಂದ ಚಾಕುವಿನಿಂದ ಶಿವಶಂಕರನು ಚುಚ್ಚಿದ್ದಾನೆ ಎಂದು ಅವಾಚ್ಯ ಶಬ್ಧಗಳಿಂದ ಬೈದು ಜೀವ ಬೆದರಿಕೆ ಹಾಕಿದ್ದಾನೆ ಎಂದು ತಿಳಿಯಿತು ಎಂದರೆ ಸರಿಯಲ್ಲ. ನಂತರ ಆಕೆಯ ತಂದೆ ಬಂದಿದ್ದು ನನ್ನ ಆಟೋದಲ್ಲಿ ತನುಜಾಳನ್ನು ದವಾಖಾನೆಗೆ ಕರೆದುಕೊಂಡು ಹೋಗಿರುತ್ತಾರೆ ಎಂದರೆ ಸರಿ. ಉಳಿದ ಹೇಳಿಕೆಯನ್ನು ನಾನು ಮೇಲೆ ಹೇಳಿದಂತೆ ನಿಶಾನೆ ಪಿ–15 ರಪ್ರಕಾರ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಘಟನೆಯ ಬಗ್ಗೆ ನನಗೆ ಮಾಹಿತಿ ಇದ್ದರೂ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಬಿಎನಜೆ (ಎಲಎಡಿಸಿ) ವಕೀಲರಿಂದ:**

ಏನೂ ಇಲ್ಲ.

**ಮರು ವಿಚಾರಣೆ:** ಇರುವುದಿಲ್ಲ.

(ಸಾಕ್ಷಿದಾರರ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಹೇಳಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಗಿದೆ.)

ಓ ಹೇ ಕೇ ಸರಿ ಇದೆ.

ನಾಲ್ಕನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಧಾರವಾಡ.